# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 533 (597) |
| ಸದಸ್ಯರ ಹೆಸರು | | ಶ್ರೀ ಅ. ದೇವೇಗೌಡ(ಪದವೀದರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | | **14.12.2020** |
| ಉತ್ತರಿಸಬೇಕಾದ ಸಚಿವರು | | ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) |
| ಪ್ರಶ್ನೆ | | ಉತ್ತರ |
| (ಅ) | 2015ನೇ ಸಾಲಿನಲ್ಲಿ ಅಧಿಸೂಚನೆಗೊಂಡ ಸಹಾಯಕ ಪ್ರಾಧ್ಯಾಪಕರ ನೇಮಕಾತಿ 2017ನೇ ಜನವರಿಯಲ್ಲಿ ಮೊದಲ ಪಟ್ಟಿಯಲ್ಲಿ 1960 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಭರ್ತಿಯಾಗದ 100 ಕ್ಕೂ ಹೆಚ್ಚು ಹುದ್ದೆಗಳಿಗೆ ಬದಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ 28.03.2019 ರಲ್ಲಿ ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಅಧಿಸೂಚಿಸಿದ್ದು, ಈವರೆವಿಗೂ ನೇಮಕಾತಿ ಆದೇಶ ನೀಡದಿರಲು ಕಾರಣವೇನು; | ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2014ರ ಕಾರ್ಯಭಾರಕ್ಕನುಗುಣವಾಗಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಚಾಲ್ತಿಯಲ್ಲಿದ್ದ ಮೀಸಲಾತಿ ನಿಯಮಗಳನ್ವಯ ವರ್ಗವಾರು ಸಮತಳ ಹಾಗೂ ಲಂಭ ಮೀಸಲಾತಿಗನುಗುಣವಾಗಿ ವಿಷಯವಾರು ಪಟ್ಟಿಯನ್ನು ಸಿದ್ಧಪಡಿಸಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಇದುವರೆವಿಗೂ ವಿವಿಧ ವಿಷಯಗಳಲ್ಲಿನ ಒಟ್ಟು 2040 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಅದರಂತೆ ಸರ್ಕಾರವು ವಿವಿಧ ದಿನಾಂಕಗಳಲ್ಲಿ ಸದರಿ ಆಯ್ಕೆಪಟ್ಟಿಗಳನ್ನು ಅಧಿಸೂಚನೆಗಳ ಮೂಲಕ ಪ್ರಕಟಿಸಿದೆ.<br><br>ಸಹಾಯಕ ಪ್ರಾಧ್ಯಾಪಕರ ವಿಶೇಷ ನೇಮಕಾತಿ ನಿಯಮಗಳು 2014ರ ನಿಯಮ 8 ಉಪ ನಿಯಮ (2) ರಲ್ಲಿ ತಿಳಿಸಿರುವಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 27.05.2017 ರಂದು ನೀಡಿರುವ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 127 ಡಿಸಿಇ 2017, ದಿನಾಂಕ: 18.01.2019 ರಲ್ಲಿ ಪ್ರಕಟಿಸಿದ್ದು, ದಿನಾಂಕ: 28.03.2019ರಂದು ರಾಜ್ಯಪತ್ರದಲ್ಲಿಯೂ ಸಹ ಪ್ರಕಟಗೊಂಡಿರುತ್ತದೆ.<br><br>ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ, ಇದುವರೆವಿಗೂ ನೇಮಕಾತಿ ಆದೇಶ/ಸ್ಥಳ ನಿಯುಕ್ತಿ ಆದೇಶ ಹೊರಡಿಸಿದ್ದರೂ ಕರ್ತವ್ಯಕ್ಕೆ ಹಾಜರಾಗದಿರುವ ಹಾಗೂ ಸ್ಥಳ ಆಯ್ಕೆ ಕೌನ್ಸಲಿಂಗ್‌ಗೆ ಗೈರು ಹಾಜರಾಗಿರುವ ಅಭ್ಯರ್ಥಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಡಿಸಿಇ 2017, |

| | | |
|---|---|---|
| | | ದಿನಾಂಕ: 26.08.2020 ರಲ್ಲಿ ಒಟ್ಟು 65 ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಿ ಆದೇಶಿಸಲಾಗಿದ್ದು, ಸದರಿ ಅಭ್ಯರ್ಥಿಗಳ ಬದಲಾಗಿ ಹೆಚ್ಚುವರಿ ಆಯ್ಕೆಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಧಿಸೂಚಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿ, ಆರ್ಥಿಕ ಇಲಾಖೆಯು ಪ್ರಸ್ತಾವನೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮರುಮಂಡಿಸಲು ತಿಳಿಸಿರುತ್ತದೆ. |
| (ಆ) | ನೇಮಕಾತಿ ಪ್ರಕ್ರಿಯೆಯಲ್ಲಿ ಉಂಟಾದ ವಿಳಂಬದಿಂದಾಗಿ ದಿನಾಂಕ: 28.03.2019 ರಂದು ಪ್ರಕಟಣೆಗೊಂಡ ಪಟ್ಟಿಯು ಅಧಿಸೂಚಿಸಿದ್ದರೂ ಪ್ರಕ್ರಿಯೆ ವಿಳಂಬವಾದ ಕಾರಣ ಅಮಾನ್ಯಗೊಂಡಿದ್ದು, 2020ರ ಜೂನ್ ತಿಂಗಳದಲ್ಲಿ "ಸಚಿವ ಸಂಪುಟ ಸಭೆ" ಯಲ್ಲಿ ನೇಮಕಾತಿ ಕಾಯ್ದೆಗೆ ತಿದ್ದುಪಡಿ ಮಾಡಿ ಸದರಿ ಪಟ್ಟಿಗೆ 2 ವರ್ಷಗಳ ಮಾನ್ಯತೆ ನೀಡಿದ್ದು, ಈ ಮಾನ್ಯತೆಯು ಮಾರ್ಚ್ 2021ಕ್ಕೆ ಅಮಾನ್ಯವಾಗಲಿದೆಯೇ; | ಸಹಾಯಕ ಪ್ರಾಧ್ಯಾಪಕರ ವಿಶೇಷ ನೇಮಕಾತಿ ನಿಯಮಗಳು 2014 ರ ನಿಯಮ 8 ಉಪ ನಿಯಮ (2) ರಲ್ಲಿ ತಿಳಿಸಿರುವಂತೆ, ಹೆಚ್ಚುವರಿ ಆಯ್ಕೆ ಪಟ್ಟಿಯ ಮಾನ್ಯತೆಯು ಮಾರ್ಚ್ 2021ಕ್ಕೆ ಕೊನೆಗೊಳ್ಳಲಿದೆ. |
| ಇ) | 2017ರ ಪಟ್ಟಿಯಲ್ಲಿ ನೇಮಕಾತಿಯ ಹಲವು ಅಭ್ಯರ್ಥಿಗಳು ವಯೋಮಿತಿ ಮೀರಿದ್ದು, ನೇಮಕಾತಿಗೊಳ್ಳದಿದ್ದಲ್ಲಿ ಅವರುಗಳು ಅತಂತ್ರವಾಗುವ ಸಾಧ್ಯತೆ ಇರುವುದರಿಂದ ಸರ್ಕಾರ ಕೈಗೊಂಡಿರುವ ಕ್ರಮವೇನು? | ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಧಿಸೂಚನೆ ಹೊರಡಿಸಿದ ನಂತರ ನೇಮಕಾತಿ ನೀಡುವ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುವುದು. ಹಾಗೂ ಈಗಾಗಲೇ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ವಯೋಮಿತಿ ಅನ್ವಯಿಸುವುದಿಲ್ಲ |

**ಇಡಿ 232 ಡಿಸಿಇ 2020**

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)